# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿಆ(ಘ.ತ್ಯಾ.ನಿ)/ಪಿಆರ್/37/2015-16

ವಿಶೇಷ ಆಯುಕ್ತರು (ಘ.ತ್ಯಾ.ನಿ/ಆ)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:29-12-2015.

:: ಕಛೇರಿ ಆದೇಶ ::

ರವರಿಗೆ,

ಎಲ್ಲಾ ವಲಯ ಜಂಟಿ/ಅಪರ ಆಯುಕ್ತರು
ಜಂಟಿ ಆಯುಕ್ತರು (ಘ.ತ್ಯಾ.ನಿ/ಆ)
ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು (ಘ.ತ್ಯಾ.ನಿ)
ಬಿಬಿಎಂಪಿ, ಬೆಂಗಳೂರು.

ಮಾನ್ಯರೆ,

ವಿಷಯಃ ಚರ್ಚಿಸಿ ಎಂದು ಬರೆದಿರುವ ಕಡತಗಳನ್ನು ಆಯಾ ಅಧಿಕಾರಿಗಳು ನೇರವಾಗಿ ಬಂದು ಜರೂರಾಗಿ ಚರ್ಚಿಸುವ ಬಗ್ಗೆ.

*****

ಮೇಲಿನ ವಿಷಯದತ್ತ ಗಮನಹರಿಸಲು ಕೋರುತ್ತಾ, ಕೆಲವು ಸಂದರ್ಭಗಳಲ್ಲಿ ಕಡತದ ಟಿಪ್ಪಣಿ ಹಾಳೆಯ ಕಂಡಿಕೆಯಲ್ಲಿ ಚರ್ಚಿಸಿ ಎಂದು ತಿಳಿಸಲಾಗಿರುವ ಸಮಯದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಚರ್ಚೆಗೆ ಬಾರದೇ ಕೆಳಹಂತದ ಅಧಿಕಾರಿಗಳಿಗೆ ಕಡತಗಳನ್ನು ಹಾಗೆಯೇ ರವಾನಿಸುತ್ತಿರುವುದನ್ನು ಗಮನಿಸಲಾಗಿರುತ್ತದೆ. ಇದರಿಂದ ಕಾಲಹರಣವಾಗುತ್ತಿದ್ದು, ಸರಿಯಾದ ಸಮಯಕ್ಕೆ ಕಡತ ವಿಲೇವಾರಿವಾಗುತ್ತಿರುವುದಿಲ್ಲ ಹಾಗೂ ಕೆಲಸ ಮಂದಗತಿಯಲ್ಲಿ ಸಾಗುತ್ತಿರುವುದಲ್ಲದೇ ಕೆಳಹಂತದ ಅಧಿಕಾರಿಗಳು ಸರಿಯಾದ ಸಮಯಕ್ಕೆ ಬಂದು ಚರ್ಚೆ ನಡೆಸಿದೇ ಇರುವುದನ್ನು ಗಮನಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕಡತದಲ್ಲಿ ಯಾವ ಅಧಿಕಾರಿಗೆ ಚರ್ಚಿಸಿ ಎಂದು ತಿಳಿಸಲಾಗಿರುತ್ತದೆ ಅಂತಹ ಅಧಿಕಾರಿಗಳು ಜರೂರಾಗಿ ನೇರವಾಗಿ ಬಂದು ಚರ್ಚಿಸಿ ತುರ್ತಾಗಿ ಕಡತವನ್ನು ವಿಲೇವಾರಿ ಮಾಡಿಕೊಳ್ಳಲು ಈ ಮೂಲಕ ಸೂಚಿಸಿದೆ.

29.12.15

ವಿಶೇಷ ಆಯುಕ್ತರು (ಘ.ತ್ಯಾ.ನಿ.)
ಬಿಬಿಎಂಪಿ

ಪ್ರತಿಯನ್ನು:

<u>ಪ್ರತಿಯನ್ನು:</u>

1) ಪೂಜ್ಯ ಮಹಾಪೌರರ ಆದ್ಯಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2) ಉಪ ಮಹಾಪೌರರ ಆದ್ಯಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3) ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4) ಆಯುಕ್ತರು, ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
5) ವಿಶೇಷ ಆಯುಕ್ತರು, (ಯೋಜನೆ), (ಹಣಕಾಸು) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7) ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
10) ಕಛೇರಿ ಕಡತಕ್ಕೆ.